## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ/1885/2021
ಪಿಓ-ಎ.ಆರ್.ಇ-6(ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:29/01/2022.
31

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ**

**ವಿಷಯ: ಶ್ರೀ. ರವೀಂದ್ರ ಬಾಳಪ್ಪ ಮಾದರ ಬಿನ್ ಬಾಳಪ್ಪ, ವಿಷಯ ನಿರ್ವಾಹಕರು, ಭೂ ಸುಧಾರಣಾ ವಿಭಾಗ, ಗೋಕಾಕ್ ತಹಶೀಲ್ದಾರ್ ಕಛೇರಿ ಮತ್ತು ಗ್ರಾಮ ಸಹಾಯಕ, ಅರಳಿಮಟ್ಟಿ ಗ್ರಾಮ, ಗೋಕಾಕ, ಬೆಳಗಾವಿ ಜಿಲ್ಲೆರವರು** ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

****

1. ಬೆಳಗಾವಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ರವೀಂದ್ರ ಬಾಳಪ್ಪ ಮಾದರ ಬಿನ್ ಬಾಳಪ್ಪ, ವಿಷಯ ನಿರ್ವಾಹಕರು, ಭೂ ಸುಧಾರಣಾ ವಿಭಾಗ, ಗೋಕಾಕ್ ತಹಶೀಲ್ದಾರ್ ಕಛೇರಿ ಮತ್ತು ಗ್ರಾಮ ಸಹಾಯಕ, ಅರಳಿಮಟ್ಟಿ ಗ್ರಾಮ, ಗೋಕಾಕ, ಬೆಳಗಾವಿ ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). **ಶ್ರೀ. ಪ್ರಹ್ಲಾದ ಕೃಷ್ಣಾಜಿ ಮುತಾಲಿಕ ದೇಸಾಯಿ, ವಾಸ: ಕಳ್ಳಿಗುದ್ದಿ, ಗೋಕಾಕ್ ತಾಲೂಕು, ಬೆಳಗಾವಿ ಜಿಲ್ಲೆ, ಹಾಲಿ ವಾಸ: ಟೋಲ್ ನಾಕಾ ಹತ್ತಿರ, ಸಾರಸ್ವತಪುರ, ದೇಸಾಯಿ ಬಿಲ್ಡಿಂಗ್, ಧಾರವಾಡ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ **ಶ್ರೀ. ಪ್ರಹ್ಲಾದ ಕೃಷ್ಣಾಜಿ ಮುತಾಲಿಕ ದೇಸಾಯಿರವರ** ಸ್ವಂತ ಊರು ಕಳ್ಳಿಗುದ್ದಿ ಗ್ರಾಮವಾಗಿದ್ದು, ಸದರಿ ಗ್ರಾಮದಲ್ಲಿ ರಿ.ಸ.ನಂ.64/2/ಎ ರಲ್ಲಿ 8 ಎಕರೆ ಜಮೀನು ಇದ್ದು, ಅದು ದೂರುದಾರರ ತಂದೆ ತಾಯಿ

ಹೆಸರಿನಲ್ಲಿರುತ್ತದೆ. ಅವರು ತೀರಿಕೊಂಡ ನಂತರ, 2015ರಲ್ಲಿ ಸದರಿ ಜಮೀನು ದೂರುದಾರರು ಮತ್ತು ಅವರ ತಂಗಿ ಇಂದ್ರಬಾಯಿ ಅವರ ಹೆಸರಿಗೆ ಆಗಿರುತ್ತದೆ. ಸದರಿ ಜಮೀನನ್ನು ರೈತಾವಾ ಮಾಡುವ ಸಲುವಾಗಿ ಉತಾರದ ಹಕ್ಕಿನ ಕಾಲಂ ನಂ.11ರಲ್ಲಿ ಹೊಸ ಮತ್ತು ಅವಿಭಾಜ್ಯ ಶರ್ತು ಮತ್ತು 15 ವರ್ಷ ಪರಭಾರೆ ಮಾಡಬಾರದು ಎಂದು ದಿ: 06/07/1981 ರಲ್ಲಿ ದೂರುದಾರರ ತಂದೆಯವರ ಹೆಸರಿನಲ್ಲಿ ಭೂನ್ಯಾಯಮಂಡಳಿ, ಗೋಕಾಕ ತಾಲೂಕುರವರ ಆದೇಶದ ಮೇರೆಗೆ, ಪಂಚವಟಿ ಕಿಮ್ಮತ್ತಿನಲ್ಲಿ 1,840/- ರೂ. ತುಂಬಿದ್ದರಿಂದ, ಸಂಖ್ಯೆ: ಎಲ್.ಆರ್.ಎ.ಜಿ.ಕೆ.–77–15 ರ ಪ್ರಕಾರ :ಮೆ: ಸ್ಪೆಷಲ್ ತಹಶೀಲ್ದಾರ್, ಲ್ಯಾಂಡ್ ರಿಫಾರ್ಮ್ಸ್, ಗೋಕಾಕ್ ಇವರಿಂದ ಫಾರಂ ನಂ.10 ಬಂದಿರುತ್ತದೆ. ಆ ಪ್ರಕಾರ 6 ವರ್ಷ ಜಮೀನು ಹಸ್ತಾಂತರ ಮಾಡಬಾರದು ಎಂದು ಆದೇಶವಾಗಿದ್ದು, ದೂರುದಾರರ ತಂದೆಯವರನ್ನು ಮಾಲ್ಕಿ ಅಂತ ದಾಖಲು ಮಾಡಿದ್ದು ಇರುತ್ತದೆ. ಸದರಿ ಆದೇಶದ ಪ್ರಕಾರ ಉತಾರದಲ್ಲಿರುವ ಶರ್ತುಗಳನ್ನು (ಷರತ್ತುಗಳನ್ನು) ಕಡಿಮೆ ಮಾಡಲು ದೂರುದಾರರು ದಿ: 14/11/2018 ರಂದು ಗೋಕಾಕ್ ತಹಶೀಲ್ದಾರ್‌ರವರ ಕಛೇರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ. ನಂತರ ದಿ: 27/12/2018 ರಂದು ಎದುರುದಾರರ ಕಛೇರಿಗೆ ಬಂದು ಎದುರುದಾರರನ್ನು ದೂರುದಾರರು ಭೇಟಿಯಾಗಿ ಅವರ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರು ಜನವರಿ 15ರ ನಂತರ ಭೇಟಿಯಾಗುವಂತೆ ತಿಳಿಸಿರುತ್ತಾರೆ. ದಿ: 17/01/2019 ರಂದು ಬೆಳಿಗ್ಗೆ 11 ಗಂಟೆಗೆ ದೂರುದಾರರು ಎದುರುದಾರರನ್ನು ಭೇಟಿಯಾಗಿ ಅವರ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರು 15,000/- ರೂ. ಲಂಚದ ಹಣ ಕೊಡಬೇಕು ಎಂದು ಒತ್ತಾಯಿಸಿದ್ದಲ್ಲದೆ, ಸಾಹೇಬರು ವರ್ಗಾವಣೆಯಾಗುವವರಿದ್ದಾರೆ, ಬೇಗ ಹಣ ತಂದು ಕೊಟ್ಟರೆ, ಅವರ ಸಹಿ ಪಡೆದು, ಕೆಲಸ ಮಾಡಿಕೊಡುತ್ತೇನೆ ಎಂದು ದೂರುದಾರರಿಗೆ ತಿಳಿಸಿರುತ್ತಾರೆ. ದೂರುದಾರರು ಎದುರುದಾರರೊಂದಿಗೆ ಮಾತನಾಡಿದ ಸಂಭಾಷಣೆಯನ್ನು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿದ್ದು ಇರುತ್ತದೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ್ದರಿಂದ, ದೂರುದಾರರು ದಿ: 18/01/2019 ರಂದು ಬೆಳಗಾವಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರಿಗೆ ದೂರನ್ನು ಸಲ್ಲಿಸಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.02/2019 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದುಪಡಿ ಕಾಯ್ದೆ 2018) ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 18/01/2019 ರಂದು ತನಿಖಾಧಿಕಾರಿಗಳು ಜಪ್ತಿಪೂರ್ವ ಪಂಚನಾಮೆಯ ಸಮಯದಲ್ಲಿ ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ ದೂರುದಾರರನ್ನು ಪರಿಚಯಿಸಿ, ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ, ಪಂಚಸಾಕ್ಷಿದಾರರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ದೂರುದಾರರು ತನಿಖಾಧಿಕಾರಿಯವರ ಮುಂದೆ ಎದುರುದಾರರಿಗೆ ಲಂಚದ ಹಣವಾಗಿ ನೀಡಬೇಕಾಗಿರುವ 15,000/- ರೂ.ಗಳನ್ನು (2,000/- ರೂ. ಮುಖಬೆಲೆಯ 4 ನೋಟುಗಳು, 500/- ರೂ. ಮುಖಬೆಲೆಯ 14 ನೋಟುಗಳನ್ನು) ಹಾಜರುಪಡಿಸಿದ್ದು, ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-2ರವರು ಹೇಳಿದಂತೆ ಪಂಚಸಾಕ್ಷಿ-1 ರವರು ಸದರಿ ನೋಟುಗಳ ವಿವರಗಳನ್ನು ಒಂದು ಹಾಳೆಯಲ್ಲಿ ಮತ್ತು ಸಿಬ್ಬಂದಿ ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ಸದರಿ ನೋಟುಗಳಿಗೆ ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಪಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ಪಂಚಸಾಕ್ಷಿ-2ರವರು ಪುಡಿಲೇಪಿತ ನೋಟುಗಳನ್ನು ದೂರುದಾರರ ಪ್ಯಾಂಟಿನ ಹಿಂದಿನ ಬಲಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಯವರ ಮುಂದೆ ದೂರುದಾರರು ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲನ್ನು ಹಾಜರುಪಡಿಸಿದ್ದು, ಸದರಿ ಮೊಬೈಲ್‌ನಲ್ಲಿರುವ ಸಂಭಾಷಣೆಯನ್ನು ಪಂಚಸಾಕ್ಷಿದಾರರಿಗೆ ಕೇಳಿಸಿ, ಸದರಿ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ, ಲ್ಯಾಪ್‌ಟಾಪ್ ಮೂಲಕ ಎರಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿ, ಆ ಡಿ.ವಿ.ಡಿ.ಗಳನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರ ಬಳಿ ಹೋಗಿ ನಿಮ್ಮ ಕೆಲಸದ ಬಗ್ಗೆ ಕೇಳಬೇಕು ಆಗ ಎದುರುದಾರರು ಲಂಚದ ಹಣವನ್ನು ಬೇಡಿದರೆ ನಿಮ್ಮ ಬಳಿಯಿರುವ ಪುಡಿಲೇಪಿತ ನೋಟುಗಳನ್ನು ಅವರಿಗೆ ನೀಡಿ, ಅವರು ಸ್ವೀಕರಿಸಿದರೆ, ನಂತರ ನಿಮ್ಮ ಪ್ಯಾಂಟಿನ ಜೇಬಿನಲ್ಲಿರುವ ಕರವಸ್ತ್ರವನ್ನು ತೆಗೆದು ಮುಖ ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಮತ್ತು ಒಂದು ಧ್ವನಿಮುದ್ರಕವನ್ನು ದೂರುದಾರರಿಗೆ ನೀಡಿ ಎದುರುದಾರರ ಬಳಿ ಹೋಗುವಾಗ ಚಾಲನಾ ಸ್ಥಿತಿಯಲ್ಲಿ ಇಟ್ಟುಕೊಳ್ಳುವಂತೆ ತಿಳಿಸಿದ್ದಲ್ಲದೆ, ನೆರಳುಸಾಕ್ಷಿಗೆ ದೂರುದಾರರ ಜೊತೆ ಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ. ಸಮಯವಾಗಿದ್ದರಿಂದ ದೂರುದಾರರಿಗೆ ಮತ್ತು ಪಂಚಸಾಕ್ಷಿಗಳಿಗೆ ಮರುದಿನ ದಿ: 19/01/2019 ರಂದು ಬರುವಂತೆ ತಿಳಿಸಿರುತ್ತಾರೆ.

iii) ದಿ: 19/01/2019ರಂದು ತನಿಖಾಧಿಕಾರಿಗಳ ಮುಂದೆ ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚಸಾಕ್ಷಿ ಹಾಜರಾದ ನಂತರ, ಮತ್ತೊಮ್ಮೆ ಜಪ್ತಿಪೂರ್ವದ ಪಂಚನಾಮೆಯನ್ನು ಜರುಗಿಸಿ, ನಂತರ ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಗಳು ಎದುರುದಾರರ ಕಛೇರಿ ಬಳಿ ಬಂದಿರುತ್ತಾರೆ. ತನಿಖಾಧಿಕಾರಿಯವರು ಮತ್ತೊಮ್ಮೆ ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಸೂಚನೆಗಳನ್ನು ನೆನಪಿಸಿ ಕಳುಹಿಸಿಕೊಟ್ಟಿದ್ದು, ಅಂದು ಬೆಳಿಗ್ಗೆ ಸುಮಾರು 10.45 ಗಂಟೆಯ ಸಮಯಕ್ಕೆ ದೂರುದಾರರು ಎದುರುದಾರರ ಕಛೇರಿಗೆ ಹೋಗಿ ಅವರ ಕೆಲಸದ ಬಗ್ಗೆ ಕೇಳಿದಾಗ ಎದುರುದಾರರು ದೂರುದಾರರಿಗೆ ಕೆಲಸ ಮಾಡಿದ್ದೇನೆ ಅಂತ ತಿಳಿಸಿ, ಹಣ ನೀಡುವಂತೆ ಕೈ ಸನ್ನೆ ಮಾಡಿದ್ದು, ಆಗ ದೂರುದಾರರು ಅವರ ಬಳಿ ಇದ್ದ ಫಿನಾಪ್ತಲಿನ್ ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ನೀಡಿದಾಗ ಎದುರುದಾರರು ಹಣ ಪಡೆದು ಎರಡೂ ಕೈಗಳಿಂದ ಎಣಿಸಿ ಪ್ಯಾಂಟಿನ ಮುಂದಿನ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ಎದುರುದಾರರು ಕಬರ್ಡದಿಂದ ಶರ್ತು ಕಡಿಮೆ ಮಾಡುವ ಕುರಿತು, ಗೋಕಾಕ್ ತಹಶೀಲ್ದಾರ್‌ರವರು ಕಳ್ಳಿಗುದ್ದಿ ಗ್ರಾಮಲೆಕ್ಕಾಧಿಕಾರಿಗೆ ಬರೆದ ಪತ್ರವನ್ನು ನೀಡಿರುತ್ತಾರೆ. ನಂತರ ದೂರುದಾರರು ಕಛೇರಿಯಿಂದ ಹೊರಬಂದು, ಕೈವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆಮಾಡಿದ್ದು, ಆಗ ತನಿಖಾಧಿಕಾರಿಗಳು, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ಧಾವಿಸಿ ದೂರುದಾರರು ತೋರಿಸಿದ ಎದುರುದಾರರನ್ನು ವಶಕ್ಕೆ ಪಡೆದು, ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಸಿಬ್ಬಂದಿ ಸಹಾಯದಿಂದ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ, ಎರಡು ಬಟ್ಟಲುಗಳಲ್ಲಿ ದ್ರಾವಣವನ್ನು ತೆಗೆದುಕೊಂಡು ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ಅ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ಅ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರು ಪ್ರತ್ಯೇಕವಾಗಿ ಆ ದ್ರಾವಣಗಳನ್ನು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ, ಎದುರುದಾರರು ಪ್ಯಾಂಟಿನ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ಆ ಹಣವನ್ನು ಪಂಚಸಾಕ್ಷಿ–2ರವರು ತನಿಖಾಧಿಕಾರಿಯವರ ಸೂಚನೆಯಂತೆ ಎದುರುದಾರರ ಪ್ಯಾಂಟಿನ ಜೇಬಿನಿಂದ ತೆಗೆದು ಹಾಜರುಪಡಿಸಿರುತ್ತಾರೆ. ಪಂಚಸಾಕ್ಷಿದಾರರು ಆ ನೋಟುಗಳ ವಿವರಗಳನ್ನು ಪರಿಶೀಲಿಸಿ ನೋಡಲಾಗಿ, ಆ ನೋಟುಗಳ

ವಿವರಗಳನ್ನು ಜಪ್ತಿಪೂರ್ವ ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿದ ನೋಟುಗಳಿಗೆ ತಾಳೆಯಾಗಿರುತ್ತವೆ. ಆ ಕಾರಣ ತನಿಖಾಧಿಕಾರಿಯವರು ಆ ನೋಟುಗಳನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಬೇರೊಂದು ಪ್ಯಾಂಟಿನ ವ್ಯವಸ್ಥೆಮಾಡಿ, ಅವರು ಧರಿಸಿದ್ದ ಪ್ಯಾಂಟಿನ ಮುಂದುಗಡೆಯ ಎಡಜೇಬಿನಲ್ಲಿ ಲಂಚದ ಹಣ ಇಟ್ಟುಕೊಂಡಿದ್ದ ಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರು ಆ ದ್ರಾವಣವನ್ನು ಮತ್ತು ಪ್ಯಾಂಟನ್ನು ವಶಕ್ಕೆ ಪಡೆದಿರುತ್ತಾರೆ.

iv) ಟ್ರ್ಯಾಪ್ ಸಮಯದಲ್ಲಿ ದೂರುದಾರರ ವಶದಲ್ಲಿದ್ದ ಧ್ವನಿಮುದ್ರಕದಲ್ಲಿದ್ದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಜಪ್ತಿ ಪಂಚನಾಮೆಯಲ್ಲಿ ಲಿಪಿಕರಿಸಿಕೊಂಡು, ನಂತರ ಲ್ಯಾಪ್‌ಟಾಪ್ ಮೂಲಕ ಸದರಿ ಸಂಭಾಷಣೆಯನ್ನು ಎರಡು ಡಿ.ವಿ.ಡಿಗಳಿಗೆ ವರ್ಗಾಯಿಸಿ, ನಂತರ ಡಿ.ವಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರ ಮಾದರಿ ಧ್ವನಿಯನ್ನು ಪಡೆದುಕೊಂಡು, ನಂತರ ಆ ಧ್ವನಿಯನ್ನು ಲ್ಯಾಪ್‌ಟಾಪ್‌ಗೆ ವರ್ಗಾಯಿಸಿ, ಲ್ಯಾಪ್‌ಟಾಪ್ ಮುಖಾಂತರ ಎರಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿ ಆ ಡಿ.ವಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ದೂರುದಾರರ ಮಾದರಿಧ್ವನಿಯನ್ನು ಸಹ ಪಡೆದು ಲ್ಯಾಪ್‌ಟಾಪ್ ಮೂಲಕ ಎರಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿ, ಆ ಡಿ.ವಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ಅವರ ಸಮಜಾಯಿಷಿಯಲ್ಲಿ "ಗೋಕಾಕ್ ತಾಲೂಕಿನ ಕಳ್ಳಿಗುದ್ದಿ ಗ್ರಾಮದ ಜಮೀನು ರೈತಾವಾ ಮಾಡುವ ಕುರಿತು 15,000/- ರೂ. ಲಂಚ ಪಡೆದುಕೊಂಡಿದ್ದು, ಅದರಲ್ಲಿ ಯಾರೂ ಮೇಲಾಧಿಕಾರಿಗಳು ಶಾಮೀಲು ಇರುವುದಿಲ್ಲ. ನಾನು ವೈಯುಕ್ತಿಕವಾಗಿ ರೈತಾವಾ ಮಾಡುವ ಕುರಿತು ಲಂಚ ಪಡೆದುಕೊಂಡಿರುತ್ತೇನೆ." ಎಂದು ಬರೆದುಕೊಟ್ಟಿರುತ್ತಾರೆ. ದೂರುದಾರರು ಮತ್ತು ನೆರಳುಸಾಕ್ಷಿ ಸದರಿ ಸಮಜಾಯಿಷಿಯನ್ನು ಒಪ್ಪಿರುತ್ತಾರೆ. ಇತರೆ ಕ್ರಮಗಳನ್ನು ಎಲ್ಲರ ಸಮಕ್ಷಮ ನಿರ್ವಹಿಸಿ, ಪ್ರಕರಣದ ವಿದ್ಯಮಾನಗಳನ್ನು ತಿಳಿಸಿ, ಎದುರುದಾರರನ್ನು ದಸ್ತಗಿರಿಮಾಡಿ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ. ಧ್ವನಿ ಪರೀಕ್ಷಾ ವರದಿಯಲ್ಲಿ ಎದುರುದಾರರ ಧ್ವನಿಯು ಅವರ ಮಾದರಿ ಧ್ವನಿಯೊಂದಿಗೆ ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ಕಂಡುಬಂದಿರುತ್ತದೆ. ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳ್ನು ಮತ್ತು ತಜ್ಞರ

ವರದಿಗಳನ್ನು ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 04/10/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಎದುರುದಾರರು ಅವರ ಸಮಜಾಯಿಷಿಯ ಪ್ಯಾರಾ–12ರಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 2ರ ಕಾರ್ಯವ್ಯಾಪ್ತಿಯಲ್ಲಿ ಬರುವ ನೌಕರನಾಗಿರುವುದಿಲ್ಲ. ನನ್ನ ಕರ್ತವ್ಯಗಳು ವೇತನವನ್ನು ಪಡೆಯುವ ಕರ್ತವ್ಯವಾಗಿರುವುದಿಲ್ಲ. ಸರಕಾರಿ ಸಾರ್ವಜನಿಕ ನೌಕರನಾಗಿರುವುದಿಲ್ಲ. ಆ ಕಾರಣ, ಯಾವುದೇ ವಿಚಾರಣೆಯನ್ನು ಕೈಗೊಳ್ಳುವ ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿಲ್ಲ ಹಾಗೂ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ 1966 ಮತ್ತು ಪ್ರಸ್ತುತ ನಿಯಮಗಳು 2021ರ ನಿಯಮಗಳು ಅನ್ವಯಿಸುವುದಿಲ್ಲವೆಂದು ಸಮಜಾಯಿಷಿ ಬರೆದುಕೊಟ್ಟಿರುತ್ತಾರೆ ಮತ್ತು ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ, ಕಾರಣ ಧ್ವನಿ ಪರೀಕ್ಷಾ ವರದಿಯಲ್ಲಿ ಎದುರುದಾರರ ಧ್ವನಿಯು ಅವರ ಮಾದರಿ ಧ್ವನಿಯೊಂದಿಗೆ ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ಕಂಡುಬಂದಿರುತ್ತದೆ ಮತ್ತು ಜಪ್ತಿಪಂಚನಾಮೆ ಸಮಯದಲ್ಲಿ ನೀಡಿದ ಸಮಜಾಯಿಷಿಯಲ್ಲಿ ಲಂಚ ಪಡೆದಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆ ಕಾರಣ ಮತ್ತು ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

31/1/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.